ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,
ಸಿ.ಸಿ. ನಂ.:45/2025

........................................................................

CW 04
PW 04

| | | |
|---|---|---|
| ಹೆಸರು | ಃ | ಅಭೀಷ್ಷೇಕ್ ನುಚ್ಚಂಬ್ಲಿ |
| ತಂದೆಯ ಹೆಸರು | ಃ | ಚಂದ್ರಶೇಖರ |
| ವಯಸ್ಸು | ಃ | 23 ವರ್ಷ |
| ಉದ್ಯೋಗ | ಃ | ವಿದ್ಯಾರ್ಥಿ, ಎಸ್ ಡಿ ಎಮ್ ಧಾರವಾಡ, |
| ವಾಸಸ್ಥಳ | ಃ | ಹಳಿಯಾಳ. |

ದಿನಾಂಕ 28-10-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ರವರು ಪರಿಚಯ. ಉಳಿದವರು ಪರಿಚಯ ಇಲ್ಲ. ಆರೋಪಿಯನ್ನು ಈ ಮೊದಲು ನೋಡಿಲ್ಲ.

ಚಾಸಾ 1 ರವರಿಗೆ ಸುಮಾರು 4 ರಿಂದ 6 ತಿಂಗಳ ಹಿಂದೆ ಅಪಘಾತವಾಗಿತ್ತು, ಆಗ ನಾನು ನನ್ನ ಮನೆಯಲ್ಲಿ ಇದ್ದೆ. ನನ್ನ ಸಿನಿಯರ್ ನನಗೆ ಫೋನ್ ಮಾಡಿ ಚಾಸಾ 1 ರವರಿಗೆ ಅಪಘಾತವಾಗಿದೆ, ಹಳಿಯಾಳ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂದು ತಿಳಿಸಿದರು. ಆದ್ದರಿಂದ ನಾನು ಚಾಸಾ 1 ರವರಿಗೆ ಭೇಟಿಯಾಗಲು ಹಳಿಯಾಳ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಅವರಿಗೆ ಪ್ರಥಮ ಚಿಕಿತ್ಸೆ ನೀಡಲಾಗಿತ್ತು, ಅವರನ್ನು ಧಾರವಾಡಕ್ಕೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಬೇಕು ಎಂದು ತಿಳಿಸಿದರು. ನಾನು ಅವರೊಂದಿಗೆ ಅಂಬೂಲೆನ್ಸ್ ನಲ್ಲಿ ಧಾರವಾಡಕ್ಕೆ ಹೋಗಿದ್ದೆ. ಕೆಸರೊಳ್ಳಿ ಗಿಂತ ಮುಂದೆ ದಾಂಡೇಲಿಗೆ ಹೋಗುವ ತಿರುವು ರಸ್ತೆಯಲ್ಲಿ ಅಪಘಾತವಾಗಿತ್ತು ಆ ಜಾಗಕ್ಕೆ ಮರುದಿನ ಪೊಲೀಸರು ನನ್ನನ್ನು ಕರೆಯಿಸಿದ್ದರು. ಅಲ್ಲಿ ನಾನು, ಪೊಲೀಸರು ಮತ್ತು ಇಬ್ಬರು ಜನ ಇದ್ದರು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಘಟನಾ ಜಾಗದ ಪಂಚನಾಮೆಯನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ3 ಸಿ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಕಚ್ಚಾ ನಕಾಶೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಘಟನಾ ಜಾಗದ ಕಚ್ಚಾ ನಕಾಶೆಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ4 ಸಿ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ವಾಹನ ಜಪ್ತು ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ವಾಹನ ಜಪ್ತು ಪಂಚನಾಮೆಯನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ6 ಸಿ ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ 2 ರ ಭಾವಚಿತ್ರವನ್ನು ತೋರಿಸಿ ಕೇಳಲಾಗಿ ಅದರಲ್ಲಿ ತಾವು ಮತ್ತು ಸಾಕ್ಷಿದಾರರು ಇರುವುದಾಗಿ ನುಡಿಯುತ್ತಾರೆ. ಪೊಲೀಸರು ನನಗೆ ಕೈ ಮಾಡು ಎಂದು ಹೇಳಿದ್ದರಿಂದ ಕೈ ಮಾಡಿ ಜಾಗವನ್ನು ತೋರಿಸುತ್ತಿದ್ದೇನೆ ಎನ್ನುತ್ತಾರೆ.

ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಿ ಕೇಳಲಾಗಿ ಅದು ವಾಹನ ಜಪ್ತು ಪಂಚನಾಮೆ ಆಗಿದ್ದು, ಅದರಲ್ಲಿ ತಾವು ಇರುವುದಾಗಿ ನುಡಿಯುತ್ತಾರೆ ಮತ್ತು ಸದರಿ ಭಾವಚಿತ್ರವನ್ನು ಪೊಲೀಸ ಠಾಣೆಯಲ್ಲಿ ಎಂದು ನುಡಿಯುತ್ತಾರೆ. ಅದನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಅದು ವಾಹನ ಜಪ್ತು ಪಂಚನಾಮೆ ಸಮಯದಲ್ಲಿ ತೆಗೆದ ಭಾವಚಿತ್ರವಾಗಿದ್ದು ಅದರಲ್ಲಿ ತಾವು ಇರುವುದಾಗಿ ನುಡಿಯುತ್ತಾರೆ.ಆದ್ದರಿಂದ ಸದರಿ ಭಾವಚಿತ್ರವನ್ನು ನಿಪಿ 7 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ವಾಹನ ಜಪ್ತು ಪಂಚನಾಮೆ ಸಮಯದಲ್ಲಿ ತೆಗೆಯಲಾಗಿದೆ ಎನ್ನುತ್ತಾರೆ. ಈ ವಿಚಾರವಾಗಿ ಪೊಲೀಸರು ನನ್ನನ್ನು ಕರೆದು ವಿಚಾರಣೆ ಮಾಡಿಲ್ಲ. ನಾನುಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 01-11-2024 ರಂದು ಹೇಳಿಕೆ ನೀಡಿ ಅದರಲ್ಲಿ ದಿನಾಂಕ 31-10-2024 ರಂದು ------------ ಚಾಲಕನ ಮೇಲೆ ದೂರು ನೀಡಿರುವ ವಿಷಯ ಗೊತ್ತಿದೆ ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ಅಲ್ಲಗಳೆದ ಮೇರೆಗೆ ಅದನ್ನು ನಿಪಿ 8 ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ನೀವು ತೋರಿಸಿದ ಜಾಗದಲ್ಲಿ ಪೊಲೀಸರು ಚಾಸಾ 2 ಮತ್ತು 3 ರವರ ಸಮಕ್ಷಮ ದಿನಾಂಕ 01-11-2024 ರಂದು ಬೆಳಗ್ಗೆ 10-15 ರಿಂದ 11-15 ರ ವರೆಗೆ ಜರುಗಿಸಿದರು, ಆ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತೆಗೆದು, ಭಾವಚಿತ್ರವನ್ನು ತೆಗೆದರು ಎಂದರೆ ಸರಿ.

ಅದೇ ದಿನ ಪೊಲೀಸ ಠಾಣೆಯಲ್ಲಿ ಅಪಘಾತ ಪಡಿಸಿದ ಬಸ್ ಅನ್ನು ನೀವು ತೋರಿಸಿದ್ದೀರಿ, ಸದರಿ ಬಸ ನ ಪಂಚನಾಮೆಯನ್ನು ಪೊಲೀಸರು ಚಾಸಾ 2 ಮತ್ತು 3 ರವರ ಸಮಕ್ಷಮ ದಿನಾಂಕ 01-11-2024 ರಂದು ಬೆಳಗ್ಗೆ 11-25 ರಿಂದ 12-30 ರ ವರೆಗೆ ಜರುಗಿಸಿದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಬಸ್ ಅನ್ನು ನಾನು ತೋರಿಸಿಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ನೀವು ಅಪಘಾತದಲ್ಲಿ ಒಳಪಟ್ಟ ಬೈಕ್ ಅನ್ನು ತೋರಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರಕರಣದ ಕುರಿತು ಸಂಪೂರ್ಣ ಮಾಹಿತಿ ಇದ್ದರೂ, ಅಪಘಾತವನ್ನು ನೀವು ಕಣ್ಣಾರೆ ನೋಡಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತದ ಪಡಿಸಿದ ಬಸ್ ನ ಚಾಲಕ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನಾಗಿರುತ್ತಾನೆ ಎಂದರೆ ಸಾಕ್ಷಿ ನಾನು ಈ ಹಿಂದೆ ಅವರನ್ನು ನೋಡಿಲ್ಲ ಎನ್ನುತ್ತಾರೆ.

<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ ಎಸ್ ಎಲ್ ಎಸ್ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.